ಪ್ರಕೃತಿ ವಿಕೋಪದಿಂದ ಬೆಳೆ ನಾಶವಾದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಬೆಳೆಯ ಇಳುವರಿಯನ್ನು ಆರಾಣಗಿಂತ ಕಡಿಮೆ ಎಂದು ಘೋಷಿಸಿದ ಪಕ್ಷದಲ್ಲಿ ಬೆಳೆ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಅವಕಾಶವಿರುತ್ತದೆ.

ಹರಿಜನ ವಾಡಗಳಲ್ಲಿ ಲೋಕೋಪಯೋಗಿ ಕಾಮಗಾರಿಗಳು

೪೯೮. ಶ್ರೀಮತಿ ಸುಮಾವಸಂತ (ವೀರಾಜಪೇಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫ ರಿಂದ ಈ ವರೆವಿಗೂ ಕೊಡಗು ಜಿಲ್ಲೆಯಲ್ಲಿ ತೆಗೆದುಕೊಂಡ ಹರಿಜನವಾಡ ಕಾಮಗಾರಿಗಳೆಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳದಿದ್ದಲ್ಲಿ ಅದಕ್ಕೆ ಕಾರಣವೇನು ;

ಆ) ವೀರಾಜಪೇಟೆ ತಾಲ್ಲೂಕಿನಲ್ಲಿ ೧೯೮೫ ರಿಂದ ೧೯೮೭ರ ವರೆಗೆ ನಿರ್ಮಿಸಲಾದ ಸೇತುಬಂಧನಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ೧೯೮೫ ರಿಂದ ಈ ವರೆವಿಗೂ ಕೊಡಗು ಜಿಲ್ಲೆಯಲ್ಲಿ ಈ ಯೋಜನೆಯಲ್ಲಿ ೨೨ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಇನ್ನೊಂದು ಕಾಮಗಾರಿಯನ್ನು ತಾಂತ್ರಿಕ ಮಂಜೂರಾತಿಯ ನಂತರ ತೆಗೆದುಕೊಳ್ಳುವುದು. ಈ ಕೆಲಸಗಳು ಈಗ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತವೆ.

ಆ) ೧೯೮೫ ರಿಂದ ಮಾರ್ಚ್ ೮೭ರ ವರೆಗೆ ವೀರಾಜಪೇಟೆಯಲ್ಲಿ ಒಟ್ಟು ೩ ಮೋರಿಗಳನ್ನು ಸೇತು ಬಂಧನ ಯೋಜನೆಯಲ್ಲಿ ನಿರ್ಮಿಸಲಾಗಿದೆ.

೧೯೮೫–೮೭ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಾದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಾಮಗಾರಿ

೪೯೯. ಶ್ರಿ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫–೮೭ರ ಆಯವ್ಯಯದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸೇರಿಸಲಾದ ಕೆರೆಗಳ ಸಂಖ್ಯೆ ಎಷ್ಟು?

ಆ) ಆ ಪೈಕಿ, ಈಗಾಗಲೇ ಎಷ್ಟು ಕೆರೆಗಳ ನಿರ್ಮಾಣ ಕೆಲಸ ಮಾಡಿ ಮುಗಿಸಲಾಗಿದೆ?

ಶ್ರೀ ಹೆಚ್. ಡಿ. ದೇವೇಗೌಡ. (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೫೫ ಸಣ್ಣನೀರಾವರಿ ಕೆರೆಗಳು.

ಆ) ಸಣ್ಣ ನೀರಾವರಿ ಕೆರೆಕೆಗಳು.

ಹತ್ತಿ ಅಭಿವೃದ್ಧಿ ಯೋಜನೆ

೫೫೮. ಶ್ರೀ ಕೆ. ಬಿ ಕೋಳಿವಾಡ, (ರಾಣೆಬೆನ್ನೂರು).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭–೮೮ನೇ ಸಾಲಿನಿಂದ ಹತ್ತಿ ಅಭಿವೃದ್ಧಿ ಯೋಜನೆಯನ್ನು ಸ್ಥಗಿತಗೊಳಿಸಲು ಕಾರಣಗಳೇನು?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹತ್ತಿ ಅಭಿವೃದ್ಧಿ ಯೋಜನೆಯ ಕೆಲಸ ಕಾರ್ಯಕ್ರಮಗಳನ್ನು ವಿಸ್ತರಣಾ ಯೋಜನೆಯ ತಾಲ್ಲೂಕು ಸಿಬ್ಬಂದಿಗಳ ಮುಖಾಂತರವೇ ನಿರ್ವಹಿಸಲು ಸಾಧ್ಯವಿದೆ ಎಂದು ಕಂಡುಬಂದ ಕಾರಣ ಈ ಯೋಜನೇತರ ಕಾರ್ಯಕ್ರಮದ ಕೆಳಗೆ ಇರುವ ಹುದ್ದೆಗಳನ್ನು ವಜಾ ಮಾಡಲಾಗಿದೆ.